Mr. SPEAKER.—It is hypothetical.

ಶ್ರೀ ಟಿ. ಮಾದಯ್ಯ ಗೌಡ.—ಖಾನಗಿ ಪ್ರೌಢ ಶಾಲೆಗಳಿಗೆ ಪಂಚಾಯಿತಿಗಳವರು ಸಹಾಯ ದ್ರವ್ಯ ಕೊಡುವುದರಲ್ಲಿ ಸರ್ಕಾರದ ಅಭಿಮತ ಏನು ಸ್ವಾಮಿ ?

ಶ್ರೀ ಎಸ್. ಆರ್. ಕಂಠಿ.—ಅಭಿಮತದ ಪ್ರಶ್ನೆಯಲ್ಲ. ಕಾನೂನಿನ ಪ್ರಶ್ನೆ ಇದೆ.

Sri SANJEEVANATH AIKALA.—Is it a fact that the high schools run by the taluk board are denied the grant-in-aid for furniture .....

Mr. SPEAKER.—How does it arise? This question pertains to Panchayats.

Sri SANJEEVANATH AIKALA.—Taluk Boards is the next step. I am asking whether the same rules apply to taluk boards.

Mr. SPEAKER.—The Hon'ble Member may please put a separate question.

Manure collected in the Municipal Area of Tumkur Town.

*Q.—547. Smt. G. C. BHAGEERATHAMMA (Tumkur).—

Will the Government be pleassed to state :—

(*a*) whether it has come to their notice that the health of the citizens of Tumkur is affected as the manure collected in the municipal area is being deposited in the heart of the town ;

(*b*) if so, the action taken by the Government ?

*A.—Sri K. PUTTASWAMY (Minister for Municipal Administration).—

(*a*) No.

(*b*) Does not arise in view of the reply to clause (*a*).

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಬರವಣಿಗೆಯ ಮೂಲಕ ಮಾತ್ರವಲ್ಲ ಮೊಖ್ತಾ ಮಂತ್ರಿಗಳನ್ನು ಕಂಡು ಹೇಳುವುದರ ಮೂಲಕ ತಿಳಿಸಿದ್ದರೂ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದಾರೆ. ಹಾಗಾದರೆ ಯಾವ ರೀತಿ ಸರ್ಕಾರದ ಗಮನಕ್ಕೆ ತರಬೇಕೆಂಬುದನ್ನು ಹೇಳುತ್ತಾರೆಯೇ ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ಈ ಪ್ರಶ್ನೆಯಲ್ಲಿ ಎರಡು ಭಾಗವಿದೆ. ಆದ್ದರಿಂದ ಆ ತರಹ ಉತ್ತರವನ್ನು ಕೊಟ್ಟಿದೆ. ಊರಿನ ಮಧ್ಯೆ ಇದೆ ಎಂದು ಹೇಳುತ್ತಾರೆ. ಅದು ಊರಿನ ಮಧ್ಯೆ ಇಲ್ಲ. ಊರಿನ ಪಕ್ಕದಲ್ಲಿದೆ ಎಂದು ಬರೆದಿದ್ದಾರೆ. ಎರಡನೆಯದು ಆರೋಗ್ಯಕ್ಕೆ ಧಕ್ಕೆ ತಂದಿದೆ ಎಂದು ಹೇಳುತ್ತಾರೆ. ಆರೋಗ್ಯಕ್ಕೆ ಧಕ್ಕೆ ತಂದಿಲ್ಲ. ಮುನಿಸಿಪಾಲಿಟಿಯವರು ಊರಿನ ಪೂರ್ವ ಭಾಗವಲ್ಲದೆ, ಅದನ್ನು ಬೇರೆ ಕಡೆಗೆ ಬದಲಾಯಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಸರಿಯಾದ ಮತ್ತು ಸೂಕ್ತವಾದ ಜಾಗ ದೊರೆತಿಲ್ಲ. ಜಾಗ ದೊರೆತ ಕೂಡಲೇ ಬದಲಾಯಿಸುತ್ತೇವೆಂದು ಬರೆದಿದ್ದಾರೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರು, ತಿಪ್ಪೆಗುಂಡಿ ಅಲ್ಲಿರುವುದರಿಂದ ಆರೋಗ್ಯಕ್ಕೆ ಧಕ್ಕೆ ಬರುತ್ತದೆ ಎಂದು ಬರೆದು ಕಳಿಸಿಲ್ಲವೇ ಸ್ವಾಮಿ ? ಅದನ್ನು ಎಷ್ಟು ಕಾಲದೊಳಗೆ ಬದಲಾಯಿಸುತ್ತಾರೆ ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರು ಬರೆದಿರುವ ವಿಚಾರ ನನಗೆ ತಿಳಿಯದು. ಅದನ್ನು ಬದಲಾಯಿಸಬೇಕೆಂದು ಸ್ಥಳೀಯ ಸಂಸ್ಥೆಯವರು ಇದ್ದಾರೆ. ಸ್ಥಳ ಹುಡುಕುತ್ತಿದ್ದೇವೆ, ಅದಷ್ಟು ಜಾಗ್ರತೆ ಬದಲಾಯಿಸುತ್ತೇವೆಂದು ಬರೆದಿವ್ದಾರೆ. ಆದುದರಿಂದ ಜಾಗ ಸಿಕ್ಕಿದ ಕೂಡಲೇ ಬದಲಾಯಿಸುತ್ತಾರೆ. ಯಾವಾದರೂ ನಾಗರಿಕರು ಸೂಕ್ತವಾದ ಜಾಗವನ್ನು ಅದಷ್ಟು ಜಾಗ್ರತೆ ಒದಗಿಸಿಕೊಟ್ಟರೆ ಬದಲಾಯಿಸುವುದಕ್ಕೆ ಅನುಕೂಲವಾಗುತ್ತದೆ. ಅದನ್ನು ಯಾವಾಗ ಬದಲಾಯಿಸಬಹುದು ಎನ್ನುವುದಕ್ಕೆ ಸರ್ಕಾರದವರು ಭರವಸೆ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎನ್. ಎಂ. ಕೃಷ್ಣ.— ಊರಿನ ಮಧ್ಯೆ ಇಲ್ಲದೇ ಹೋದರೆ ಜನರ ಆರೋಗ್ಯಕ್ಕೆ ಧಕ್ಕೆ ಬಾರದೆಇದ್ದರೆ ಅದನ್ನು ಬದಲಾಯಿಸುವುದಕ್ಕೆ ಕಾರಣವೇನಿದೆ ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ಊರಿನ ಪೂರ್ವಭಾಗದಲ್ಲಿದೆ. ರೆಸಿಡೆನ್ಷಿಯಲ್ ಕಾಲೊನಿ ಹತ್ತಿರವಿದೆ ಆದಕ್ಕಾಗಿ ನೂಕ್ಕ ಜಾಗ ಸಿಕ್ಕಿದ ಕೂಡಲೇ ಬೇರೆ ಕಡೆಗೆ ಬದಲಾಯಿಸುತ್ತೇವೆಂದು ಬರೆದಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಊರಿನ ಹತ್ತಿರ ಇಲ್ಲವೆ ಹೋದರೂ ಮಾನ್ಯ ಸದಸ್ಯರಾದ ಶ್ರೀಮತಿ ಭಾಗೀರಥಮ್ಮನವರ ಮನೆ ಹತ್ತಿರ ಇರುವುದರಿಂದ ಆದಷ್ಟು ಜಾಗ್ರತೆ, ಒಬ್ಬ ಸದಸ್ಯರ ಆರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ಬೇರೆ ಕಡೆಗೆ ಬದಲಾಯಿಸುವುದಕ್ಕೆ ಏರ್ಪಾಡು ಮಾಡುತ್ತಾರೇಯೇ ಸ್ವಾಮಿ ?

Mr. SPEAKER.—It is disallowed.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾವು ಏನೂ ಮಾಡುವುದಕ್ಕಾಗುವುದಿಲ್ಲ ಎಂದು ಮಂತ್ರಿಗಳು ಹೇಳಿದರು. ಸ್ಥಳೀಯ ಸಂಸ್ಥೆಗಳು ಏನಾದರೂ ಕರ್ತವ್ಯ ಲೋಪ ಮಾಡಿದರೆ, ಜನತೆಯ ಆರೋಗ್ಯಕ್ಕೆ ಧಕ್ಕೆ ಬರತಕ್ಕ ರೀತಿಯಲ್ಲಿ ವರ್ತಿಸಿದರೆ ಆಗ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಸ್ವಾಮಿ ?

Mr. SPEAKER.—It is hypothetical.

Sri C. J. MUCKANNAPPA.—She has made a representation that the municipal council has refused...

Mr. SPEAKER.—Questions should not be put in a hypothetical manner.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಜನರಲ್ ಹಾಸ್ಪಿಟಲ್ ಕಟ್ಟಿಸಿದ್ದಾರೆ. ಅದರ ಸುತ್ತ ಕನದ ಗುಂಡಿಗಳಿವೆ. ಮಾನ್ಯ ಮಂತ್ರಿಗಳು ಆ ಕಡೆ ಪ್ರಯಾಣ ಮಾಡುವಾಗ ಅವರ ದೃಷ್ಟಿಗೆ ಬಿದ್ದಿರಬಹುದು. ಈ ಕನದ ಗುಂಡಿಗಳನ್ನು ತಗೆಸುವುದಕ್ಕೆ ಸ್ಥಳೀಯ ಸಂಸ್ಥೆಗೆ ಏನಾದರೂ ಡೈರೆಕ್ಷನ್ ಕೊಡುತ್ತಾರೆಯೇ ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ಅವರು ಪಿಸಂಷನ್ ಮಾಡಿಕೊಂಡು ಹೇಳುತ್ತಿದ್ದಾರೆ. ಆಸ್ಪತ್ರೆ ಸುತ್ತಮುತ್ತ ಇರುವ ಕನದ ಗುಂಡಿಗಳು ನನ್ನ ಕಣ್ಣಿಗೆ ಬಿದ್ದಿಲ್ಲ.

Mr. SPEAKER.—I thought that Sri Muckannappa was never presumptuous.

Sri C. J. MUCKANNAPPA.—It is on the main road.

Mr. SPEAKER.—I think it is sufficient. Somebody has said it. Even walls have significance. We can leave it at that.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಈ ತಿಪ್ಪೆಗುಂಡಿಗಳ ಹತ್ತಿರ ಪಾಲಿಟೆಕ್ನಿಕ್, ಎಲೆಕ್ಟ್ರಿಕಲ್ ಕಾಲೋನಿ ಇವೆ. ಇವರಿಂದ ಸರ್ಕಾರಕ್ಕೆ ಮನವಿಪತ್ರಗಳು ಬಂದಿವೆ. ನಾಗರಿಕರು ಜಾಗ ಕೊಟ್ಟರೆ ಬದಲಾಯಿಸುತ್ತೇವೆಂದು ಹೇಳಿದರು. ನಾಗರಿಕರು ಜಾಗ ಕೊಡದೆ ಹೋದರೆ ಹಾಗೆಯೇ ಬಿಡುತ್ತಾರೆಯೇ ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ನಾಗರಿಕರು ಜಾಗವನ್ನು ಒದಗಿಸಿಕೊಡುವುದಕ್ಕೆ ಸಾಧ್ಯವಿಲ್ಲದೆ ಹೋದರೆ ಮುನಿಸಿಪಾಲಿಟಿಯವರು ಜಾಗವನ್ನು ಸ್ವಾಧೀನಪಡಿಸಿಕೊಳ್ಳಬೇಕಾಗುತ್ತದೆ. ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾದರೆ ಎಷ್ಟು ಕಾಲ ತೆಗದುಕೊಳ್ಳುತ್ತದೆ ಎನ್ನುವುದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ.

Construction of a Bus Stand at Bailhongal.

*Q.—561. Sri K. S. CHANNAPPA WALI (Sampagaon).—

Will the Government be pleased to state :—

(*a*) whether they are aware that sanction has already been accorded for the construction of a Bus Stand at Bailhongal and a suitable place has been acquired for the same ;